(c) Their cases have been duly considered by the Select Committee in the annual meetings.

ಶ್ರೀ ಎ. ಮುನಿಯಪ್ಪ.—ಮನವಿಗಳು ಎಷ್ಟು ಬಂದಿವೆ—ಎಂದು ಬಂದವು ?

ಶ್ರೀ ಎಸ್. ನಿಜಲಿಂಗಪ್ಪ.—ಬಹುಶಃ ಇದಕ್ಕೆ ಇನ್ನೊಂದು ಪ್ರಶ್ನೆ ಕೇಳಿದರೆ ಉತ್ತರ ಒದಗಿಸಬಹುದು.

ಶ್ರೀ ಎ. ಮುನಿಯಪ್ಪ.—ಷೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬನ ಐ.ಎ.ಎಸ್. ಮತ್ತು ಐ. ಪಿ. ಎಸ್. ಜನರು ಎಷ್ಟಿದ್ದಾರೆಂಬುದನ್ನು ತಿಳಿಸುವರೇ ?

Sri S. NIJALINGAPPA.—There are quite a number of them. There is a big list. If the House permits, I will lay the entire list on the table of the House.

ಶ್ರೀ ಎ. ಮುನಿಯಪ್ಪ.—ಸ್ವಾಮಿ, ಇಲ್ಲಿ ಈ ಪ್ರಶ್ನೆಗೆ ಕೊಚ್ಚಿರತಕ್ಕ ಉತ್ತರದಲ್ಲಿ ಆಯ್ಕೆ ಸಮಿತಿಯ ವಾರ್ಷಿಕ ಸಭೆಗಳಲ್ಲಿ ಅವರುಗಳನ್ನು ಆಯ್ಕೆಮಾಡುವ ಬಗ್ಗೆ ಉಚಿತ ರೀತಿಯಲ್ಲಿ ಪರಿಶೀಲಿಸಲಾಗಿದೆ ಎಂದು ಹೇಳಿದ್ದೀರಿ, ಹಾಗಾದರೆ ಮನವಿಗಳು ಬಂದಮೇಲೆ ಸಮಿತಿಗಳು ಎಷ್ಟು ಸಾರಿ ಸೇರಿವೆ; ಮತ್ತು ಹಾಗೆ ಸಮಿತಿಗಳು ಸೇರಿದಮೇಲೆ ಸಮಿತಿಯು ಫಲತಾಂಶ ವೇನು ?

ಶ್ರೀ ಎಸ್. ನಿಜಲಿಂಗಪ್ಪ.—ಸಮಿತಿಯವರು ಪ್ರತಿ ವರ್ಷ ಹೆಚ್ಚು ಕಡಿಮೆ ನವೆಂಬರ್ ತಿಂಗಳಿನಲ್ಲಿ ಯೂನಿಯನ್ ಪಬ್ಲಿಕ್ ಸರ್ವೀಸ್ ಕಮಿಷನ್ನಿನವರು ಬರುತ್ತಾರೆ. ಅವರ-ಜೊತೆಯಲ್ಲಿ ನಮ್ಮ ಆಫೀಸರು ಇರುತ್ತಾರೆ. ಎಲ್ಲರೂ ಸೇರಿ ಪ್ರತಿವರ್ಷ ನವೆಂಬರ್ ತಿಂಗಳಿನಲ್ಲಿ ಆಯ್ಕೆ ಮಾಡುತ್ತಾರೆ.

ಶ್ರೀ ಎ. ಮುನಿಯಪ್ಪ.—ಈ ಸಮಿತಿ ಮೈಸೂರು ಸರ್ಕಾರದವರು ಶಿಫಾರಸ್ಸು ಮಾಡಿದ್ದನ್ನು ಹೆಡಿಂಗ್ ಇಟ್ಟುಕೊಂಡಿರುತ್ತಾರೆ. ಇದರಿಂದ ಐ. ಎ. ಎಸ್. ಮತ್ತು ಐ. ಪಿ. ಎಸ್. ಹುದ್ದೆಗಳು ದೊರಕುವುದರಲ್ಲಿ ಅನ್ಯಾಯವಾಗುತ್ತದೆ. ಆ ರೀತಿ ಅನ್ಯಾಯಗಳು ಆಗಿದ್ದರೆ ಅವನ್ನು ಸರಿಪಡಿಸುವುದಕ್ಕೆ, ನ್ಯಾಯವನ್ನು ದೊರಕಿಸುವುದಕ್ಕೆ ತಮ್ಮ ಅಭಿಪ್ರಾಯವೇನು ?

ಶ್ರೀ ಎಸ್. ನಿಜಲಿಂಗಪ್ಪ.—ಕೆಲವು ಸಮಯದಲ್ಲಿ ಒಂದೆರಡು ಕೇಸುಗಳಲ್ಲಿ ನ್ಯಾಯ ದೊರಕದೇ ಇದ್ದಾಗ ಅದನ್ನು ಸಂಬಂಧಪಟ್ಟವರಿಗೆ ಬರೆದು ಸಾಬೀತುಪಡಿಸಬೇಕಾಯಿತು.

SHORT NOTICE QUESTIONS AND ANSWERS

Dams Construction across Varada River

47. Sri K. H. SRINIVASA (Sagar).—

Will the Minister for Public Works be pleased to state:—

(a) whether Government intend to construct flood control-*cum*-irrigation dames across Varada river and some of its tributaries (Mavinahole, etc.) at—

1. Arlihonda
2. Sannamane
3. Hardikoppa (Sagar Taluk)
4. Suntarahalli
5. Hosabele
6. Kuppagadde (Sorab Taluk)
7. Bastikoppa.
8. Kolgi (Siddapur Taluk);

(SRI K. H. SRINIVASA)

(*b*) whether detailed survey report, plans and estimates in respect of the abovementioned dams have already been prepared ;

(*c*) if so, the following details in respect of each one of the abovementioned dams may be given ;

1. The exact location of the dams.
2. Catchment Area.
3. Area to be submerged.
4. Area which will be irrigated.
5. Estimated cost.

(*d*) when they intend to take up the construction of these dams ?

A.—SRI VEERENDRA PATIL (Minister for Public Works).—

(*a*) The Projects are still under investigation.

(*b*) to (*d*) Does not arise in view of reply (*a*) above.

ಶ್ರೀ ಕೆ. ಎಚ್. ಶ್ರೀನಿವಾಸ್.—ಸ್ವಾಮಿ, ಇದರಲ್ಲಿ ಸುಮಾರು 8 ಸ್ಥಳಗಳಲ್ಲಿ ಫ್ಲಡ್ ಕಂಟ್ರೋರ್-ಕಮ್-ಇರಿಗೇಷನ್ ಡ್ಯಾಮನ್ನು ಕಟ್ಟುವ ಬಗ್ಗೆ ಇನ್ನು ಇನ್‌ವೆಸ್ಟಿಗೇಷನ್ ನಡೆಯುತ್ತಿದೆ ಎಂದು ಉತ್ತರವನ್ನು ಕೊಟ್ಟಿದ್ದೀರಿ, ಕೆಲವು ಸ್ಥಳಗಳಲ್ಲಿ ಇವುಗಳ ಡೀಟೈಲ್ಡ್ ಇನ್‌ವೆಸ್ಟಿಗೇಷನ್ ಆಗಿದೆ ಎನ್ನುವ ಭಾವನೆ ಬರುವ ರೀತಿಯಲ್ಲಿ ಕೆಲವು ಅಂಶಗಳನ್ನು ಪ್ರಸ್ತಾಪಿಸಲಾಗಿದೆ. ಎಲ್ಲಾ ಪ್ರಾಜೆಕ್ಟುಗಳ ಬಗ್ಗೆಯೂ ಕೂಡ ಇನ್‌ವೆಸ್ಟಿಗೇಷನ್ ಆಗಬೇಕಾಗಿದೆಯೇ ? ಅಥವಾ ಕೆಲವು ಪ್ರಾಜೆಕ್ಟ್ ಬಗ್ಗೆ ಮಾತ್ರ ಇನವೆಸ್ಟಿಗೇಷನ್ ಆಗಬೇಕಾಗಿದೆಯೇ, ಅವುಗಳ ಸ್ಪೇಜು ಏನು, ಅವು ಯಾವಾಗ ಮುಕ್ತಾಯವಾಗುತ್ತವೆ ?

†ಶ್ರೀ ವೀರೇಂದ್ರ ಪಾಟೀರ್.—ಈ ಎಂಟು ಪ್ರಾಜೆಕ್ಟುಗಳಲ್ಲಿ ಹೆಗ್ಗೋಡು ಹತ್ತಿರ ಮಾಪಿನ ಹೊಳೆಗೆ ಅಡ್ಡಲಾಗಿ ಒಂದು ಅಣೆಕಟ್ಟನ್ನು ಕಟ್ಟುವುದು, ಮತ್ತು ದಂಡಾವತಿನದಿಗೆ ಅಡ್ಡಲಾಗಿ ಒಂದು ಅಣೆಕಟ್ಟನ್ನು ಕಟ್ಟುವುದು, ಈ ಎರಡು ಪ್ರಾಜೆಕ್ಟುಗಳ ರಿಪೋರ್ಟ್ ತಯಾರಾಗಿ ವರದಿಗಳು ನನ್ನ ಮುಂದೆ ಇವೆ. ಉಳಿದವುಗಳು ಇನ್‌ವೆಸ್ಟಿಗೇಷನ್ ಸ್ಟೇಜಿನಲ್ಲಿವೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಈ ಕೆಲಸಗಳನ್ನು ಆದಷ್ಟು ಶೀಘ್ರವಾಗಿ ತೆಗೆದುಕೊಳ್ಳುವ ಉದ್ದೇಶ ಸರ್ಕಾರಕ್ಕೆ ಇದಯೆ ?

ಶ್ರೀ ವೀರೇಂದ್ರ ಪಾಟೀರ್.—ಇನ್‌ವೆಸ್ಟಿಗೇಷನ್ ಮಾಡುತ್ತಿದ್ದಾರೆ. ಪ್ರಾಜೆಕ್ಟ್ ರಿಪೋರ್ಟ್ ತಯಾರಾಗುತ್ತಿದೆ, ಅದು ಆದಮೇಲೆ ಮುಂದಿನ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಈಗ ರಿಪೋರ್ಟ್ ತಯಾರಾಗಿರುವುಗಳ ಬಗ್ಗೆ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀರ್.—ಇವು ಮೀಡಿಯಂ ಇರಿಗೇಷನ್ ಪ್ರಾಜೆಕ್ಟುಗಳು. ಈಗ ನಾವು ಯಾವ ಮೀಡಿಯಂ ಇರಿಗೇಷನ್ ಪ್ರಾಜೆಕ್ಟುಗಳನ್ನೂ ತೆಗೆದುಕೊಳ್ಳುವುದಕ್ಕೆ ವಿಚಾರ ಮಾಡಿಲ್ಲ. ಈಗ ಹೆವಿ ಸ್ಪಿರ್ ಒವರ್ ಕೆಲಸಗಳು ಇವೆ. ಆದ್ದರಿಂದ ಮುಂದೆ ಈ ಕೆಲಸಗಳನ್ನು ತೆಗೆದುಕೊಳ್ಳುವ ಬಗ್ಗೆ ವಿಚಾರ ಮಾಡಬೇಕಾಗುತ್ತದೆ.